## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 367 |
| 2. | ಸದಸ್ಯರ ಹೆಸರು | : | ಶ್ರೀ ಐವನ್ ಡಿ. ಸೋಜಾ |
| 3. | ಉತ್ತರಿಸುವ ದಿನಾಂಕ | : | 18/07/2024 |
| 4. | ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಜಿಲ್ಲಾ ನ್ಯಾಯಾಲಯಕ್ಕೆ ಹೊಸ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು; ಈ ಬಗ್ಗೆ ಕೈಗೊಂಡ ಕ್ರಮಗಳೇನು; | Construction of Court Complex – Mangaluru – Multistoried New court Complex – Block -A ಕಟ್ಟಡವನ್ನು ನಿರ್ಮಿಸಲು ಸರ್ಕಾರದ ಆದೇಶ ಸಂಖ್ಯೆ: ಲೋಇ/20/ಬಿಜೆಪಿ/2024, ದಿನಾಂಕ:16.03.2024ರಲ್ಲಿ ರೂ.60.20 ಕೋಟಿ ಅಂದಾಜು ಮೊತ್ತಕ್ಕೆ Block -A ನಿರ್ಮಾಣ ಕಾಮಗಾರಿಯನ್ನು ಮಾತ್ರ ಒಳಗೊಂಡಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br>ದಿನಾಂಕ:02.04.2024ರಂದು ಉಚ್ಚ ನ್ಯಾಯಾಲಯದ Administrative Judge ಇವರೊಂದಿಗೆ ನಡೆದ ಸಭೆಯಲ್ಲಿ ನೀಡಿದ ನಿರ್ದೇಶನದಂತೆ, Block-A ನಿರ್ಮಾಣ ಮಾತ್ರ ಕೈಗೊಳ್ಳುವುದರ ಬದಲಾಗಿ Block –A ಮತ್ತು Block -B ಒಳಗೊಂಡಂತೆ ರೂ.60.20 ಕೋಟಿ ಅಂದಾಜು ಮೊತ್ತಕ್ಕೆ ಸಿದ್ಧಪಡಿಸಿದ ಪರಿಷ್ಕೃತ ರೇಖಾ ಅಂದಾಜು ಪತ್ರಿಕೆಯು ರಿಜಿಸ್ಟ್ರಾರ್ ಜನರಲ್, ಉಚ್ಚನ್ಯಾಯಾಲಯ ಬೆಂಗಳೂರು ಇವರ ಮುಖೇನ ಪತ್ರ ಸಂಖ್ಯೆ:- DJBS 28/04, ದಿ:29.05.2024ರಂದು ಸರ್ಕಾರಕ್ಕೆ ಸ್ವೀಕೃತವಾಗಿದೆ.<br>ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| ಆ) | ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ವಕೀಲರುಗಳಿಗೆ "ವಕೀಲರ ಭವನ" ಸ್ಥಾಪನೆಗೆ ಬೇಡಿಕೆ ಇದ್ದರೂ ಈ ಬಗ್ಗೆ ಕ್ರಮಕೈಗೊಳ್ಳದಿರಲು ಕಾರಣಗಳೇನು; | CSS Norms ಅಡಿಯಲ್ಲಿ ವಕೀಲರುಗಳಿಗೆ ಪ್ರತ್ಯೇಕ ಕಟ್ಟಡ ನಿರ್ಮಾಣದ ಬಗ್ಗೆ ಪ್ರಸ್ತಾಪವಿರುವುದಿಲ್ಲ. ನ್ಯಾಯಾಲಯ ಕಟ್ಟಡ ನಿರ್ಮಾಣದಲ್ಲಿ Bar Room ನಿರ್ಮಾಣಕ್ಕೆ ಅವಕಾಶ ಮಾಡಲು ತಿಳಿಸಲಾಗಿರುತ್ತದೆ. |
| ಇ) | ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ವಕೀಲರ ಸಂಘಕ್ಕೆ "ವಕೀಲರ ಭವನ" ಪ್ರಾರಂಭಿಸಿದ್ದರೂ ಯಾವುದೇ ಮೂಲಭೂತ ಸೌಲಭ್ಯವನ್ನು ಒದಗಿಸದೇ ಇರುವುದರಿಂದ ಪ್ರಯೋಜನಕ್ಕೆ ಬಾರದಂತೆ "ವಕೀಲರ | ಮೂಡಬಿದ್ರೆಯಲ್ಲಿರುವ ನ್ಯಾಯಾಲಯ ಕಟ್ಟಡದ ಆವರಣದಲ್ಲಿ ವಕೀಲರ ಭವನ ನಿರ್ಮಿಸುವ ಕಾಮಗಾರಿಯು ರೂ. 295.00 ಲಕ್ಷಗಳಿಗೆ ಸಿ.ಇ.ಆರ್ ನಂ. 09/2021-22ರಲ್ಲಿ ತಾಂತ್ರಿಕ ಮಂಜೂರಾತಿಗೊಂಡು ಅಂದಾಜು ಪಟ್ಟಿಯಂತೆ ಕಾಮಗಾರಿ ಪೂರ್ಣಗೊಂಡಿರುತ್ತದೆ. |

| | | |
|---|---|---|
| | ಭವನ" ಆಗಿರುವುದು ಸರ್ಕಾರದ ಗಮನಕ್ಕೆ ತಂದರೂ ಹಣ ಬಿಡುಗಡೆ ಮಾಡದೇ ಇರಲು ಕಾರಣವೇನು; | ಪೀಠೋಪಕರಣಗಳನ್ನು ಹೊರತುಪಡಿಸಿ ರಸ್ತೆ, ವಿದ್ಯುತ್ ಸಂಪರ್ಕ, ನೀರು ಮತ್ತು ನೈರ್ಮಲೀಕರಣ ವ್ಯವಸ್ಥೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯಿಂದ ದಿನಾಂಕ: 12.01.2023 ರಂದು ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ, ಮೂಡಬಿದ್ರೆ ನ್ಯಾಯಾಲಯ ಇವರಿಗೆ ಹಸ್ತಾಂತರಿಸಲಾಗಿದೆ.<br><br>ವಕೀಲರ ಭವನಕ್ಕೆ ಬೇಕಾದ ಪೀಠೋಪಕರಣ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಉಪಯೋಗಿ ಇಲಾಖೆಯಿಂದ ಪ್ರಸ್ತಾವನೆ ಸ್ವೀಕೃತಗೊಂಡ ನಂತರ ಅನುದಾನ ಲಭ್ಯತೆಯಂತೆ ಕ್ರಮ ವಹಿಸಲಾಗುವುದು. |
| ಈ) | ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಿ.ಸಿ.ರೋಡ್ ನ್ಯಾಯಾಲಯದ ಕಟ್ಟಡವು ಯಾವಾಗ ಪೂರ್ಣಗೊಳ್ಳುವುದು; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಿ.ಸಿ.ರೋಡ್‌ನಲ್ಲಿ ಹೊಸ ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕೆ ರೂ.2900.00 ಲಕ್ಷ ಮೊತ್ತವು ಬೇಕಾಗಿದ್ದು, ಅನುದಾನ ಲಭ್ಯತೆಯಂತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. |
| ಉ) | ರಾಜ್ಯದಲ್ಲಿ ಮಹಿಳಾ ವಕೀಲರುಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಪ್ರತ್ಯೇಕ ವಕೀಲರ ಭವನಗಳನ್ನು ಪ್ರಾರಂಭಿಸಲು ಸರ್ಕಾರ ಚಿಂತಿಸುವುದೇ? (ವಿವರ ನೀಡುವುದು) | ಈ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

**ಸಂಖ್ಯೆ: ಲೋಇ 23 ಬಿಎಲ್‌ಕ್ಯೂ 2024**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.